# ನಾವೆಲ್ ಕರೋನಾ ವೈರಸ್‌ನ ಹೇಗೆ ಹರಡುತ್ತದೆ?

# ಸುರಕ್ಷಿತವಾಗಿ ಇರುವುದು ಹೇಗೆ?

## ಸಾಮಾನ್ಯ ತಡೆಗಟ್ಟುವಿಕೆಯ ಕ್ರಮಗಳು

### ಸಮುದಾಯದಲ್ಲಿ ಅತ್ಯಂತ ಪರಿಣಾಮಕಾರಿಯಾದ ತಡೆಗಟ್ಟುವಿಕೆಯ ಕ್ರಮಗಳೆಂದರೆ:

•ಆಗಾಗ ನಿಮ್ಮ ಕೈಗಳನ್ನು ಆಲ್ಕೋಹಾಲ್ ಇರುವ ಸ್ಯಾನಿಟೈಜರ್ ನಿಂದ, ಅಥವಾ ಸಾಬೂನು ಮತ್ತು ನೀರಿನಿಂದ ತೊಳೆಯಿರಿ. ನಿಮ್ಮ ಕೈಗಳಲ್ಲಿ ಕೊಳೆ ಕಾಣುತ್ತಿದ್ದರೆ, ಕೇವಲ ಸಾಬೂನು ಮತ್ತು ನೀರನ್ನು ಮಾತ್ರ ಬಳಸಿ.

•ಪದೇ ಪದೇ ನಿಮ್ಮ ಕಣ್ಣುಗಳು, ಮೂಗು, ಹಾಗೂ ಬಾಯಿಯನ್ನು ಮುಟ್ಟಿಕೊಳ್ಳಬೇಡಿ.

• ಕೆಮ್ಮುವಾಗ ಅಥವಾ ಸೀನುವಾಗ ನಿಮ್ಮ ಬಾಯಿ ಹಾಗೂ ಮೂಗನ್ನು ಮುಚ್ಚಿಕೊಳ್ಳಿ. ಟಿಶ್ಯೂ ಅಥವಾ ಮಡಚಿದ ಮೊಣಕೈಯನ್ನು ಬಳಸಿ ಕೆಮ್ಮಿ, ಹಾಗೂ ಟಿಶ್ಯೂವನ್ನು ತಕ್ಷಣ ಕಸದ ಬುಟ್ಟಿಯಲ್ಲಿ ಹಾಕಿ.

•ನಿಮಗೆ ಉಸಿರಾಟದ ತೊಂದರೆ ಕಂಡು ಬಂದರೆ, ಬಟ್ಟೆಯ ಮಾಸ್ಕ್ ಹಾಕಿಕೊಳ್ಳಿ ಹಾಗೂ ಮಾಸ್ಕ್ ಅನ್ನು ತೆಗೆದ ನಂತರ, ನಿಮ್ಮ ಕೈಗಳನ್ನು ಸಾಬೂನಿನಿಂದ ತೊಳೆಯಿರಿ.

•ಉಸಿರಾಟದ ತೊಂದರೆಯ ಲಕ್ಷಣಗಳಿರುವ ವ್ಯಕ್ತಿಗಳಿಂದ ಕನಿಷ್ಠ 4 ಅಡಿ ದೂರವಿರಿ.

•ಅನವಶ್ಯಕ ಪ್ರಯಾಣವನ್ನು ತಪ್ಪಿಸಿ ಹಾಗೂ ಜನರ ದೊಡ್ಡ ಗುಂಪುಗಳಿಂದ ದೂರವಿರಿ.

•ನಿಮ್ಮ ಆರೋಗ್ಯ ಸರಿ ಇಲ್ಲ ಎನಿಸಿದರೆ, ಮನೆಯಲ್ಲಿಯೇ ಇರಿ.

•ಮೊಬೈಲ್ ಫೋನ್ ಬಳಸುವಾಗ, ಹೆಡ್ ಫೋನ್/ಸ್ಪೀಕರ್ ಗಳನ್ನು ಬಳಸಿ. ಇದರಿಂದ ಮುಖವನ್ನು ಮುಟ್ಟುವುದನ್ನು ತಪ್ಪಿಸಬಹುದು.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು



# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು




•ಶೌಚಾಲಯದ ಆವರಣದಲ್ಲಿ ಸಾಬೂನುಗಳು ಅಥವಾ ಹ್ಯಾಂಡ್ ಸ್ಯಾನಿಟೈಜರ್ ಇರುವುದನ್ನು ಖಚಿತಪಡಿಸಿಕೊಳ್ಳಿ ಹಾಗೂ ಶೌಚಾಲಯ ಬಳಸುವವರು ಸಾಬೂನುಗಳು ಅಥವಾ ಹ್ಯಾಂಡ್ ಸ್ಯಾನಿಟೈಜರ್ ಅನ್ನು ಉಪಯೋಗಿಸುವಂತೆ ಉತ್ತೇಜಿಸಿ.

•ಶೌಚಾಲಯ ಬಳಸುವವರಿಗೆ ಹಣವನ್ನು ನಾಣ್ಯಗಳ ಮೂಲಕ ಪಾವತಿ ಮಾಡುವಂತೆ ಹೇಳಿ. ನೀವು ಪಡೆದ ನಾಣ್ಯಗಳನ್ನು ಸೋಂಕು ಇಲ್ಲದಂತೆ ಶುದ್ಧೀಕರಿಸಿದ ನಂತರ ಬಳಸಬಹುದು.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು




- ಶುಲ್ಕ ಸಂಗ್ರಹ ಕೌಂಟರ್ ಗಳಲ್ಲಿ ಬಳಕೆದಾರರಿಂದ ಕನಿಷ್ಠ 4 ಅಡಿ ದೂರವನ್ನು ಕಾಪಾಡಿಕೊಳ್ಳಿ.
- ಶೌಚಾಲಯ ಬಳಕೆದಾರರ ನಡುವೆ 4 ಅಡಿಯ ದೈಹಿಕ ಅಂತರವನ್ನು ಕಾಪಾಡಿಕೊಳ್ಳಲು ಹಾಗೂ ಶೌಚದ ಗುಂಡಿಯನ್ನು ಸರಿಯಾದ ರೀತಿಯಲ್ಲಿ ಸ್ವಚ್ಛಗೊಳಿಸುವಂತೆ ತಿಳಿಸಿ.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು



# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು



# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು




- ಶೌಚಾಲಯದಲ್ಲಿರುವ ಬಾಗಿಲಿನ ಹಿಡಿಗಳು, ಕೊಳಾಯಿಗಳು, ಶವರ್, ಕನ್ನಡಿಗಳು ಹಾಗೂ ಸಾಬೂನಿನ ಬಾಟಲಿಗಳನ್ನು ಒದ್ದೆ ಬಟ್ಟೆ ಹಾಗೂ ಸೋಂಕುನಿವಾರಕ ದ್ರವದಿಂದ ಒರೆಸುವಾಗ ಗ್ಲೌಸ್ ಧರಿಸಿ.
- ಒರೆಸುವ ಬಟ್ಟೆಯನ್ನು ಪ್ರತ್ಯೇಕ ಚೀಲದಲ್ಲಿ ಹಾಕಿ.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು

•ಶೌಚಾಲಯದ ಶೌಚ ಗುಂಡಿಯನ್ನು ಸ್ವಚ್ಛ ಮಾಡುವಾಗ, ರಕ್ಷಣೆಗೋಸ್ಕರ ಗ್ಲೌಸ್ ಹಾಕಿಕೊಳ್ಳಿ.
•ಶೌಚ ಗುಂಡಿಯ ಮುಚ್ಚಳದ ಎರಡೂ ಕಡೆ ಹಾಗೂ ಆಸನದ ಮೇಲೆ ಮತ್ತು ಕಾಲಿಡುವ ಜಾಗದಲ್ಲಿ ಸೋಪು ಪುಡಿಯನ್ನು ಹಾಕಿ ಸ್ವಚ್ಛಮಾಡಿ. ಶೌಚಗುಂಡಿಯನ್ನು ಫ್ಲಶ್ ಮಾಡಿ.
•ಶೌಚ ಗುಂಡಿಯನ್ನು ಸ್ವಚ್ಛ ಮಾಡುವಾಗ ಟಾಯ್ಲೆಟ್ ಕ್ಲೀನರ್ ಅನ್ನು ಹಾಕಿ, ಮತ್ತು ಕಲೆಗಳನ್ನು ಸ್ವಚ್ಛ ಮಾಡುವತ್ತ ಹೆಚ್ಚಿನ ಗಮನ ಕೊಡಿ. ಶೌಚ ಗುಂಡಿಯನ್ನು ಟಾಯ್ಲೆಟ್ ಬ್ರಶ್ಶಿಂದ ಸ್ವಚ್ಛಗೊಳಿಸಿ.
•ಶೌಚ ಗುಂಡಿಯನ್ನು ಫ್ಲಶ್ ಮಾಡಿದ ಮೇಲೆ, ಬ್ರಶ್ ಅನ್ನು ತೊಳೆಯಿರಿ.
•ಸೋಂಕು ನಿವಾರಕ ದ್ರವದಿಂದ ಗ್ಲೌಸ್ಗಳನ್ನು ಸ್ವಚ್ಛಗೊಳಿಸಿ, ಅದಕ್ಕೆಂದೇ ಇರುವ ಡಬ್ಬದಲ್ಲಿ ಇಡಿ.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು

- ನೆಲ ಸ್ವಚ್ಛ ಮಾಡುವ ಉಪಕರಣ ಹಾಗೂ ಬಹುಪಯೋಗಿ ಕ್ಲೀನರ್ ನಿಂದ ನೆಲವನ್ನು ಸ್ವಚ್ಛಗೊಳಿಸಿ.

- ಉಪಕರಣಗಳು ಹಾಗೂ ಗ್ಲೌಸ್, ಜೊತೆಗೆ ಅದನ್ನಿಡುವ ಡಬ್ಬಿಯನ್ನೂ ನೀರು ಮತ್ತು ಸೋಂಕುನಿವಾರಕ ದ್ರವದಿಂದ ತೊಳೆದು, ಸ್ವಚ್ಛಗೊಳಿಸಿ.
- ನೆಲ ಸ್ವಚ್ಛ ಮಾಡುವ ಉಪಕರಣಗಳು ಹಾಗೂ ಮುಟ್ಟಲಾದ ಕ್ಲೀನರ್ ಬಾಟಲಿಯ ಹೊರಭಾಗವನ್ನು ಸೋಂಕು ನಿವಾರಕ ದ್ರವದಿಂದ ಸ್ವಚ್ಛಗೊಳಿಸಿ.



# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು

• ಇದಾದ ನಂತರ, ಸೋಂಕುನಿವಾರಕ ದ್ರವದಿಂದ ನಿಮ್ಮ ಗ್ಲೌಸ್ಸ್ಗಳನ್ನು ತೊಳೆಯಿರಿ. ಮೊಣಕೈವರೆಗೂ ನಿಮ್ಮ ಕೈಗಳನ್ನು ಸಾಬೂನು ಮತ್ತು ನೀರಿನಿಂದ ತೊಳೆಯಿರಿ.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು

- ನೀವು ಕೆಲಸದ ಸ್ಥಳದಿಂದ ಹೊರಡುವ ಮೊದಲು, ಬಟ್ಟೆ ಬದಲಿಸಿಕೊಳ್ಳಲು ನಿಯೋಜಿತವಾದ ಸ್ಥಳದಲ್ಲಿಯೇ ನಿಮ್ಮ ಕೆಲಸದ ಬಟ್ಟೆಗಳನ್ನು ಬದಲಿಸಿ ಹಾಕಿ, ನಿಮ್ಮ ಸ್ವಂತ ಬಟ್ಟೆಗಳನ್ನು ಹಾಕಿಕೊಳ್ಳಿ.




- ನಿಮ್ಮ ಕೆಲಸದ ಸ್ಥಳದಲ್ಲಿ ಕೆಲಸ ಮಾಡುವಾಗ ಹಾಕಿಕೊಂಡ ಬಟ್ಟೆಗಳನ್ನು ಸೋಂಕು ನಿವಾರಕ ದ್ರವದಿಂದ ಒಗೆಯಬೇಕು.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು

- ಪ್ರತಿದಿನವೂ ಕಸದ ಬುಟ್ಟಿಗಳನ್ನು ಖಾಲಿ ಮಾಡಿ.
- ಶೇಖರಣೆ ಮಾಡಿದ ಕಸದ ಚೀಲಗಳನ್ನು ಗಟ್ಟಿಯಾಗಿ ಮುಚ್ಚಿ, ಪುರಸಭೆ/ ನಗರಸಭೆಯ ಪ್ರಕಾರ ಅದರ ವಿಲೇವಾರಿ ಮಾಡಬೇಕು.
- ಕಸದ ಬುಟ್ಟಿಗಳಲ್ಲಿ ಸೋರಿಕೆಯಾಗದ ಹಾಗೂ ಸುಲಭವಾಗಿ ತೆಗೆಯಬಹುದಾದ ಕೈಚೀಲಗಳನ್ನು ಬಳಸಿ.
- ಕಸದ ಬುಟ್ಟಿಗಳ ಮೇಲೆ ನಿಗಾ ಇಡಿ – ಅವುಗಳನ್ನು ಮುಕ್ಕಾಲಿಗಿಂತ ಹೆಚ್ಚು ತುಂಬಲು ಬಿಡಬೇಡಿ.

# ಸಮುದಾಯ ಶೌಚಾಲಯ/ಸಾರ್ವಜನಿಕ ಶೌಚಾಲಯದಲ್ಲಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು



ವೈಯಕ್ತಿಕ ರಕ್ಷಣಾ ಸಾಧನಗಳ ಆಯ್ಕೆ

- ಬಟ್ಟೆಯ ಮಾಸ್ಕ್
- ಗ್ಲೌಸ್
- ತಲೆಯ ಪಟ್ಟಿ ಹಾಗೂ ಕೈಪಟ್ಟಿ/ಮಣಿಕಟ್ಟಿನ ಪಟ್ಟಿ
- ಇಡೀ ಪಾದವನ್ನು ಮುಚ್ಚುವ ಪಾದರಕ್ಷೆ / ಗಮ್ ಬೂಟ್ಸ್

# ವೈಯಕ್ತಿಕ ರಕ್ಷಣಾ ಸಾಧನಗಳನ್ನುಧರಿಸುವುದು ಹಾಗೂ ತೆಗೆಯುವುದು ಹೇಗೆ?



- ಮಾಸ್ಕ್ ನಿಂದ ಮೂಗು ಹಾಗೂ ಬಾಯಿಯನ್ನು ಮುಚ್ಚಿಕೊಳ್ಳಿ ಹಾಗೂ ತಲೆಯ ಮತ್ತು ಕತ್ತಿನ ಹಿಂದೆ ಅದನ್ನು ದಾರ/ಎಲಾಸ್ಟಿಕ್ ಪಟ್ಟಿಯಿಂದ ಭದ್ರವಾಗಿ ಕಟ್ಟಿಕೊಳ್ಳಿ. ಮಾಸ್ಕ್ ತೆಗೆಯುವಾಗ: ಮಾಸ್ಕ್ ನ ಮುಂಭಾಗಕ್ಕೆ ಸೋಂಕು ತಗುಲಿರುತ್ತದೆ – ಅದನ್ನು ಮುಟ್ಟಬೇಡಿ! ಕೆಳಗಿನ ದಾರಗಳನ್ನು ಅಥವಾ ಎಲಾಸ್ಟಿಕ್ ಅನ್ನು ಹಿಡಿದು, ಮುಂದಿನ ಭಾಗವನ್ನು ಮುಟ್ಟದೆ ಅದನ್ನು ತೆಗೆಯಿರಿ.

- ಗ್ಲೌಸ್‌ನ ಹೊರಭಾಗಕ್ಕೆ ಸೋಂಕು ತಗುಲಿರುತ್ತದೆ, ಗ್ಲೌವ್ ಹಾಕಿಕೊಂಡ ಒಂದು ಕೈಯಿಂದ ಮತ್ತೊಂದು ಗ್ಲೌವ್ ಅನ್ನು ತೆಗೆಯಿರಿ, ಇನ್ನೊಂದು ಗ್ಲೌವ್ ಅನ್ನು ತೆಗೆಯಲು ಈ ಕ್ರಮವನ್ನು ಅನುಸರಿಸಿ.



- ನಿಮ್ಮ ಕಾಲುಗಳನ್ನು ಮುಚ್ಚುವ ಬೂಟುಗಳನ್ನು ಧರಿಸಿ. ಗ್ಲೌಸ್ ಹಾಕಿಕೊಂಡ ಕೈಯಿಂದ ನಿಮ್ಮ ಬೂಟುಗಳನ್ನು ತೆಗೆಯಿರಿ.

ಈ ಎಲ್ಲ ಐದೂ ಸಂದರ್ಭಗಳಲ್ಲಿ ಕೈಯ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು
• ವೈಯಕ್ತಿಕ ರಕ್ಷಣಾ ಸಾಧನಗಳನ್ನು ಹಾಕಿಕೊಳ್ಳುವ ಮೊದಲು ಹಾಗೂ ಅದನ್ನು ತೆಗೆಯುವಾಗ, ಗ್ಲೌಸ್ ಅನ್ನು ತೆಗೆಯುವಾಗ/ಬದಲಾಯಿಸುವಾಗ
• ಯಾವುದೇ ಶೌಚಾಲಯ ಸ್ವಚ್ಛತೆ ಅಥವಾ ನಿರ್ವಹಣಾ ಚಟುವಟಿಕೆಯನಂತರ
• ಯಾವುದೇ ಕೆಮ್ಮು, ಸೀನು, ಉಗುಳುವಿಕೆಯ ಸಂಪರ್ಕಕ್ಕೆ ಬಂದ ನಂತರ
• ಆಹಾರ ತೆಗೆದುಕೊಳ್ಳುವ ಮೊದಲು
• ಶೌಚಾಲಯವನ್ನು ಬಳಸಿದ ನಂತರ.

# ಐ.ಐ.ಎಚ್.ಎಸ್

- ಭಾರತೀಯ ಮಾನವ ವಸಾಹತುಗಳ ಸಂಸ್ಥೆಯು (ಐ.ಐ.ಎಚ್.ಎಸ್.) ಭಾರತೀಯ ವಸಾಹತುಗಳ ಸಮಾನ, ಸುಸ್ಥಿರ ಹಾಗೂ ಸಮರ್ಥ ಪರಿವರ್ತನೆಗೆ ಬದ್ಧವಿರುವ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಾಗಿದೆ. ಐಐಎಚ್ಎಸ್ ನ ಕಾರ್ಯಕ್ಷೇತ್ರವು ನಗರಗಳ ವಸತಿ, ನೆಲ, ಜಲ ಹಾಗೂ ನೈರ್ಮಲ್ಯ, ಆರ್ಥಿಕ ಅಭಿವೃದ್ಧಿ ಮತ್ತು ಹವಾಮಾನ ಬದಲಾವಣೆಯ ವಲಯಗಳಾದ್ಯಂತ ವ್ಯಾಪಿಸಿದೆ.

- ಐಐಎಚ್ಎಸ್ 150 ಕ್ಕೂ ಹೆಚ್ಚು ವೃತ್ತಿಪರರ ಸಂಸ್ಥೆಯಾಗಿದ್ದು, ಗಣನೀಯ ಕ್ಷೇತ್ರಗಳಾದ ಸಂಶೋಧನೆ, ಅಭ್ಯಾಸ ಹಾಗೂ ಕಾರ್ಯನಿರ್ವಾಹಕ ಶಿಕ್ಷಣದಲ್ಲಿ ತೊಡಗಿಸಿಕೊಂಡಿದೆ. ಐಐಎಚ್ಎಸ್ ತನ್ನ ಕಛೇರಿಗಳನ್ನು ಬೆಂಗಳೂರು, ಮುಂಬೈಯಿ, ಚೆನ್ನೈ, ದೆಹಲಿ ಹಾಗೂ ತಿರುಚಿರಾಪಳ್ಳಿಯಲ್ಲಿ ಹೊಂದಿದೆ.

# • ಟಿ.ಎನ್.ಯು.ಎಸ್.ಎಸ್.ಪಿ

- ಐಐಎಚ್ಎಸ್ ಮತ್ತು ಇತರ ಸಂಸ್ಥೆಗಳ ಒಕ್ಕೂಟವು ತಮಿಳುನಾಡು ನಗರ ನೈರ್ಮಲ್ಯ ನೆರವಿನ ಕಾರ್ಯಕ್ರಮವನ್ನು (ಟಿ.ಎನ್.ಯು.ಎಸ್.ಎಸ್.ಪಿ) ಕಾರ್ಯಗತಗೊಳಿಸುತ್ತಿವೆ. ಈ ಒಕ್ಕೂಟವು, ಮಲದ ರಾಡಿ ನಿರ್ವಹಣೆಯ ಸಂಗ್ರಹಣೆಯಿಂದ ವೈಜ್ಞಾನಿಕ ವಿಲೇವಾರಿಯವರೆಗಿನ ನೈರ್ಮಲ್ಯದ ಪೂರ್ಣ ಚಕ್ರದ ನಿರ್ವಹಣೆಯಲ್ಲಿ ರಾಜ್ಯದ 663 ನಗರಗಳು ಹಾಗೂ ಪಟ್ಟಣಗಳಾದ್ಯಂತ ಸುಧಾರಣೆಗಳನ್ನು ತರುವಲ್ಲಿ ತಮಿಳುನಾಡು ಸರ್ಕಾರಕ್ಕೆ ನೆರವು ಒದಗಿಸುತ್ತದೆ.

- ನೈರ್ಮಲ್ಯ ಕಾರ್ಯಕರ್ತರು ಈ ಕಾರ್ಯಕ್ರಮದ ಅವಿಭಾಜ್ಯ ಅಂಗವಾಗಿದ್ದು, ಇವರ ಆರೋಗ್ಯ, ಔದ್ಯೋಗಿಕ ಸುರಕ್ಷತೆ, ಅಭಿವೃದ್ಧಿ ಹಾಗೂ ಜೀವನೋಪಾಯಗಳನ್ನು ಸುಧಾರಣೆ ಮಾಡಲು, ಟಿ.ಎನ್.ಯು.ಎಸ್.ಎಸ್.ಪಿ ಅವರೊಂದಿಗೆ ಆಯ್ದ ನಗರಗಳಲ್ಲಿ ಕೆಲಸ ಮಾಡುತ್ತಿದೆ.